ದಿಃ 27.05.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಬಿ.ಜೆ, ವಕೀಲರಿಂದ ಅರ್ಜಿದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 03.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಜೆ, ವಕೀಲರಿಂದ ಅರ್ಜಿದಾರರ ಪರವಾಗಿ

2. ಆ ಸ್ವಾಭಾವಿಕ ಮರಣ ಸಂಖ್ಯೆ 5/2023 ರಲ್ಲಿ ಸಲ್ಲಿಸಿದ ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ಆ ಸ್ವಾಭಾವಿಕ ಸಾವಿನ ಬಗ್ಗೆ ಮೊದಲ ಗುಪ್ತ ವಾರ್ತೆಯ ತಿಳುವಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು, ದೂರಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಶವ ಪರೀಕ್ಷಾ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ನೋಟೀಸಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ಶವ ತನಿಖಾ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ಸುಮತಿ ರವರ ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ಧರ್ಮಣ್ ರವರ ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ಗಜೇಂದ್ರ ರವರ ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.10 ಎಂದು ಗುರುತಿಸಲಾಯಿತು, ಮಾಣಿಕ್ಯ ರವರ ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ಹೆಣ ಸಂದಾಯ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ಮಹಜರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು ಗುರುತಿಸಲಾಯಿತು, ಶವ ಪರೀಕ್ಷಾ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.14 ಎಂದು ಗುರುತಿಸಲಾಯಿತು, ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು, ವಂಶ ವೃಕ್ಷವನ್ನು ಹಾಜರು ಮಾಡಿದ್ದು ನಿ.ಪಿ.16 ಎಂದು ಗುರುತಿಸಲಾಯಿತು, ಬಾಳೂರು ಗ್ರಾಮದ ಸರ್ವೆ ನಂಬರ್ 232/4 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.17 ಎಂದು

ಗುರುತಿಸಲಾಯಿತು, ಬಾಳೂರು ಗ್ರಾಮದ ಸರ್ವೆ ನಂಬರ್ 232/3 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.18 ಎಂದು ಗುರುತಿಸಲಾಯಿತು, ದಿಃ 05.07.2023 ರಂದು 1 ನೇ ಎದುರುದಾರರಿಗೆ ನೀಡಿದ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರು ಮಾಡಿದ್ದು ನಿ.ಪಿ.19 ಎಂದು ಗುರುತಿಸಲಾಯಿತು, ನೋಟೀಸು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರು ಮಾಡಿದ್ದು ನಿ.ಪಿ.20 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಡಿ.ಕೆ.ಪಿ., ವಕೀಲರಿಂದ 1 ನೇ ಎದುರುದಾರರ ಪರವಾಗಿ

3. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲು ಶ್ರೀ ಬಿ.ಎಸ್.ಎಲ್, ವಕೀಲರಿಂದ 2 ನೇ ಎದುರುದಾರರ ಪರವಾಗಿ

4. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ಮಧ್ಯಂತರ ಆದೇಶದ ಮೇರೆಗೆ ದಿಃ 12.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಜೆ, ವಕೀಲರಿಂದ ಅರ್ಜಿದಾರರ ಪರವಾಗಿ

5. ನನ್ನ ಆಧಾರ್ ಕಾರ್ಡು ಹಾಜರು ಮಾಡಿದ್ದು ನಿ.ಪಿ.21 ಎಂದು

ಗುರುತಿಸಲಾಯಿತು. ಮೃತ ಮಣಿಕಂಠ ರವರ ಆಧಾರ್ ಕಾರ್ಡು ಹಾಜರು ಮಾಡಿದ್ದು ನಿ.ಪಿ.22 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಡಿ.ಕೆ.ಪಿ., ವಕೀಲರಿಂದ 1 ನೇ ಎದುರುದಾರರ ಪರವಾಗಿ

6. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲು ಶ್ರೀ ಬಿ.ಎಸ್.ಎಲ್, ವಕೀಲರಿಂದ 2 ನೇ ಎದುರುದಾರರ ಪರವಾಗಿ

7. ನನ್ನ ತಂದೆ ತಾಯಿಗೆ ನಾವು ಒಟ್ಟು 2 ಜನ ಮಕ್ಕಳಿರುತ್ತೇವೆ. ನನ್ನ ತಂದೆ ತಾಯಿಯು ಮೃತಪಟ್ಟಿರುತ್ತಾರೆ. ನಾನು ನನ್ನ ಕುಟುಂಬದ ಹಿರಿಯ ಮಗನಾಗಿರುತ್ತೇನೆ. ನನಗೆ ಮದುವೆಯಾಗಿರುತ್ತೇನೆ. ಮೃತ ಮಣಿಕಂಠ ರವರಿಗೆ ಮದುವೆಯಾಗಿರುವುದಿಲ್ಲ. ಮೃತ ಮಣಿಕಂಠ ರವರು ಬೃಂದಾವರ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ಮೃತ ಮಣಿಕಂಠ ರವರಿಗೆ ಕೂಲಿ ಮಜೂರಿ ನೀಡಿದ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ಮರಗಸಿ ಕೆಲಸವು ವರ್ಷಪೂರ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಬೃಂದಾವನ ಎಸ್ಟೇಟಿನಲ್ಲಿ ಮೃತ ಮಣಿಕಂಠ ರವರಿಗೆ ವಾಸ್ತವ್ಯಕ್ಕೆ ಮನೆ ಕೊಟ್ಟಿರಲಿಲ್ಲ. ಮರಗಸಿ ಕೆಲಸಕ್ಕೆ ಮತ್ತು ತೋಟದ ಇತರೆ ಕೆಲಸಗಳಿಗೆ ಬೇರೆ ಬೇರೆ ಸಂಬಳ ಇರುತ್ತದೆ ಎಂದರೆ ಸರಿ. ಮೃತ ಮಣಿಕಂಠ ಮರಗಸಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಮಣಿಕಂಠ ಬೃಂದಾವನ ಎಸ್ಟೇಟಿನಲ್ಲಿ ಮರಗಸಿ ಮಾಡುತ್ತಿರಲಿಲ್ಲ, ತೋಟದ ಕೆಲಸ ಮಾಡುತ್ತಿದ್ದ ಕಾರಣ ಅವರಿಗೆ ಕಡಿಮೆ ಸಂಬಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಮೃತ ಮಣಿಕಂಠ ರವರ ಸಂಪಾದನೆಗೆ ಅವಲಂಬಿತನಾಗಿರಲಿಲ್ಲ ಎಂದರೆ ಸರಿಯಲ್ಲ. ಮೃತ ಮಣಿಕಂಠ ಮರಗಸಿ ಕೆಲಸ ಮಾಡುವಾಗ ಬಿದ್ದು ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ಜೊತೆ ಶಾಮೀಲ್ ಆಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರವನ್ನು ಪಡೆಯಲು ಬಾಧ್ಯನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 23.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಬಿ.ಜೆ, ವಕೀಲರಿಂದ ಅರ್ಜಿದಾರರ ಪರವಾಗಿ

8. ನನ್ನ ತಂದೆ ಮತ್ತು ತಾಯಿಯರ ಮರಣ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಪಿ.23 ಮತ್ತು 24 ಎಂದು ಗುರುತಿಸಲಾಯಿತು. (ಸದರಿ ಮರಣ ಪ್ರಮಾಣ ಪತ್ರಗಳು ತಮಿಳು ಭಾಷೆ ಇರುವುದರಿಂದ ನ್ಯಾಯಾಲಯದ ಅನುಕೂಲಕ್ಕಾಗಿ ತಮಿಳು ಭಾಷೆಯಿಂದ ಇಂಗ್ಲೀಷ್ ಭಾಷೆಯಲ್ಲಿ ಇರುವ ತರ್ಜುಮೆ ಮಾಡಿರುವ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ)

ಪಾಟೀ ಸವಾಲು ಶ್ರೀ ಬಿ.ಎಸ್.ಎಲ್, ವಕೀಲರಿಂದ 2 ನೇ ಎದುರುದಾರರ ಪರವಾಗಿ

9. ವಕೀಲರು ತಮ್ಮ ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ